Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

## ಅಧಿಸೂಚನೆ

ನಂಬ್ರ. 25352/ಲೆಗ್. ಎ1/2017/ಕಾನೂನು. *ತಿರುವನಂತಪುರಂ,* *2018 ಏಪ್ರಿಲ್ 7*
*1193 ಮೀನ 24/*
*1940 ಚೈತ್ರ 17.*

2018 ಎಪ್ರಿಲ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**
ಕಾನೂನು ಕಾರ್ಯದರ್ಶಿ.

## 2018ರ 20ನೇ ನಂಬ್ರ ಅಧ್ಯಾದೇಶ

## 2018ರ ಅಬಕಾರಿ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಬತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

1077ರ ಅಬಕಾರಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಅಬಕಾರಿ (ತಿದ್ದುಪಡಿ) ಅಧ್ಯಾದೇಶ (2017ರ 38)ವನ್ನು 2017 ಡಿಸೆಂಬರ್ 21ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿರುವುದರಿಂಲೂ;

2018 ಜನವರಿ 22ನೇ ದಿನಾಂಕದಂದು ಆರಂಭವಾಗಿ 2018 ಫೆಬ್ರವರಿ 7ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ರಾಜ್ಯ ವಿದಾನಸಭೆಯ ಅಧಿವೇಶನದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲು ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಮಸೂದೆಯನ್ನು ಹದಿನಾಲ್ಕನೇ ಕೇರಳ ವಿಧಾನಸಭೆಯ 96ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸುವುದಕ್ಕಾಗಿ 2018ರ ಅಬಕಾರಿ (ತಿದ್ದುಪಡಿ) ಅಧ್ಯಾದೇಶ (2018ರ 4)ವನ್ನು 2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2018 ಫೆಬ್ರವರಿ 26ನೇ ದಿನಾಂಕದಂದು ಆರಂಭವಾಗಿ 2018 ಏಪ್ರಿಲ್ 4ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ರಾಜ್ಯ ವಿದಾನಸಭೆಯ ಅಧಿವೇಶನದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲು ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 120ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ ಉಪ-ಖಂಡ (ಎ) ಪ್ರಕಾರ ಪ್ರಸ್ತುತ ಅಧ್ಯಾದೇಶದ ಪ್ರಾಬಲ್ಯವು 2018 ಏಪ್ರಿಲ್ 9ನೇ ದಿನಾಂಕದಂದು ಮುಕ್ತಾಯವಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಜಾರಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗಬಹುದಾದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಮತ್ತು ತಾನು ತುರ್ತು ಕ್ರಮ ಕೈಗೊಳ್ಳಬೇಕಾದ ಸನ್ನಿವೇಶವು ಜಾರಿಯಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸುವರು:—

1. <u>ಸಣ್ಣ ಹೆಸರು ಮತ್ತು ಪ್ರಾರಂಭ.</u>—(1) ಈ ಅಧ್ಯಾದೇಶವನ್ನು 2018ರ ಅಬಕಾರಿ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 21ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. <u>ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 1077ರ 1ನೇ ಅಧಿನಿಯಮ.</u>—ಈ ಅಧ್ಯಾದೇಶವು ಕಾರ್ಯಚರಣೆಯಲ್ಲಿರುವಾಗ, 1077ರ ಅಬಕಾರಿ ಅಧಿನಿಯಮ (1077ರ 1) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3ರಿಂದ 6ರ ವರೆಗಿನ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪರಿಣಾಮವಿರುವುದಾಗಿದೆ.

3. <u>15ಎ ವಿಭಾಗದ ತಿದ್ದುಪಡಿ.</u>—ಪ್ರಧಾನ ಅಧಿನಿಯಮದ 15 ಎ ವಿಭಾಗದಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ "21" ಎಂಬ ಅಂಕೆಯ ಬದಲು "23" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ಬಿ) ವಿಭಾಗದಲ್ಲಿ, "21" ಎಂಬ ಅಂಕೆಯು ಬದಲು "23" ಎಂಬ ಅಂಕೆಯನ್ನು ಸೇರಿಸತಕ್ಕದ್ದು.

4. 15ಬಿ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 15ಬಿ ವಿಭಾಗದಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ "21" ಎಂಬ ಅಂಕೆಯ ಬದಲು "23" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ಬಿ) ವಿಭಾಗದಲ್ಲಿ, "ಇಪ್ಪತ್ತೊಂದು" ಎಂಬ ಪದದ ಬದಲು "ಇಪ್ಪತ್ತಮೂರು" ಎಂಬ ಪದಗಳನ್ನು ಸೇರಿಸತಕ್ಕದ್ದು.

5. 57ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 57ನೇ ವಿಭಾಗದಲ್ಲಿ,—

(ಎ) (ಎ) ಖಂಡದಲ್ಲಿ, "ಯಾವುದೇ ಮಿಶ್ರಣಾಂಶ" ಎಂಬ ಪದಗಳ ಬದಲು "ಸ್ಟಾರ್ಚ್‌ನ ಹೊರತಾದ ಯಾವುದೇ ಮಿಶ್ರಣಾಂಶ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) (ಎ) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಎ) ಆತನಿಂದ ಮಾರಲ್ಪಡುವುದೋ ಉತ್ಪಾದಿಸಲ್ಪಡುವುದೋ ಆದ ಮದ್ಯದಲ್ಲಿ ಸ್ಟಾರ್ಚ್‌ನೊಂದಿಗೆ ಬೆರೆಸುವುದೋ ಬೆರೆಸಲು ಅನುಮತಿ ನೀಡುವುದೋ ಆದಂತಹ; ಅಥವಾ";

(ಸಿ) (ಡಿ) ಖಂಡದ ನಂತರ, "ಒಂದು ಸಕ್ಷಮ ನ್ಯಾಯಾಲಯದ ಸಮಕ್ಷದಲ್ಲಿನ ಅಪರಾಧ ನಿರ್ಣಯದ ಮೇರೆಗೆ, ಪ್ರತಿಯೊಂದು ಅಪರಾಧಕ್ಕೆ ಐದು ವರ್ಷಗಳ ಕಾಲಾವಧಿಯವರೆಗಿನ ಜೈಲು ಶಿಕ್ಷೆ ಅಥವಾ ಐವತ್ತು ಸಾವಿರ ರೂಪಾಯಿಯವರೆಗಿನ ಜುಲ್ಮಾನೆ ಅಥವಾ ಎರಡೂ ಸೇರಿ ಶಿಕ್ಷಿಸತಕ್ಕದ್ದು" ಎಂಬ ಪದಗಳ ಬದಲು, ಈ ಕೆಳಗಿನ ಪದಗಳನ್ನು, ಅಂಕೆಗಳನ್ನು, ಚಿಹ್ನೆಗಳನ್ನು ಹಾಗೂ ಆವರಣಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಒಂದು ಸಕ್ಷಮ ನ್ಯಾಯಾಲಯದ ಸಮಕ್ಷದಲ್ಲಿನ ಅಪರಾಧ ನಿರ್ಣಯದ ಮೇರೆಗೆ,

(i) (ಎಎ) ಖಂಡದ ಕೆಳಗಿನ ಅಪರಾಧಗಳ ಹೊರತಾದ ಅಪರಾಧಗಳಿಗೆ ಐದು ವರ್ಷಗಳ ಕಾಲಾವಧಿಯವರೆಗಿನ ಜೈಲು ಶಿಕ್ಷೆ ಅಥವಾ ಐವತ್ತು ಸಾವಿರ ರೂಪಾಯಿಯವರೆಗಿನ ಜುಲ್ಮಾನೆ ಅಥವಾ ಎರಡೂ ಸೇರಿ;

(ii) (ಎಎ) ಖಂಡದ ಕೆಳಗಿನ ಅಪರಾಧಗಳಿಗೆ ಆರು ತಿಂಗಳವರೆಗಿನ ಜೈಲು ಶಿಕ್ಷೆ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಜುಲ್ಮಾನೆ ಅಥವಾ ಎರಡೂ ಸೇರಿ;

ಶಿಕ್ಷಿಸತಕ್ಕದ್ದು.".

6. 67ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 67ಎ ವಿಭಾಗದ ಪಟ್ಟಿಯಲ್ಲಿ,—

(i) (1)ನೇ ಕಾಲಂನಲ್ಲಿ, "21" ಎಂಬ ಅಂಕೆಯು ಇರುವ ಎರಡೂ ಸ್ಥಳಗಳಲ್ಲೂ ಅದರ ಬದಲು "23" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ii) (1), (2) ಹಾಗೂ (3)ನೇ ಕಾಲಂಗಳಲ್ಲಿನ ಅಸ್ತಿತ್ವದಲ್ಲಿರುವ ನಮೂದನೆಗಳಿಗೆ ಬದಲು ಅನುಕ್ರಮವಾಗಿ ಈ ಕೆಳಗಿನ ನಮೂದನೆಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

| | | |
|---|---|---|
| "ಮದ್ಯದೊಂದಿಗೆ ಸ್ಟಾರ್ಚ್ ಬೆರೆಸುವುದು | 57(ಎಎ) | 25,000.". |

7. ರದ್ಧತಿ ಮತ್ತು ರಕ್ಷಣೆ.— (1) 2018ರ ಅಬಕಾರಿ (ತಿದ್ದುಪಡಿ) ಅಧ್ಯಾದೇಶ (2018ರ 4)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.